**ದಿನಾಂಕಃ 16.04.2022 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎಚ್.ವಿ.ಕೆ. ವಕೀಲರಿಂದಃ**

ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ನಾನು ಶಾಲೆಗೆ ಹೋಗಿಲ್ಲ. ಈ ದಾವೆಯನ್ನು ಪಾಲು ಕೋರಿ ಸಲ್ಲಿಸಿದ್ದೇನೆ. ನನ್ನ ಸಹೋದರಿಯರಾದ 1 ಮತ್ತು 2 ನೇ ಪ್ರತಿವಾದಿಗಳು ಮದುವೆಯಾದ ನಂತರ ನಮ್ಮ ತಂದೆಯ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ತಂದೆ ವಿಕಲ ಚೇತನ ಇದ್ದಾರೆ ಎಂದರೆ ಸರಿ. ನಮ್ಮ ತಂದೆ ಬದುಕಿದ್ದಾಗ ನನ್ನ ಮತ್ತು ನನ್ನ ಸಹೋದರಿಯರೆಲ್ಲರ ಮದುವೆ ಆಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಗಂಡನೊಂದಿಗೆ ನಮ್ಮ ತವರು ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ನಾಲ್ಕು ಜನ ಹೆಣ್ಣು ಮಕ್ಕಳಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ಮದುವೆಗಿಂತ ಮೊದಲು ನನ್ನ ಮದುವೆ ಆಗಿದೆ ಎಂದರೆ ಸರಿ.

ನನ್ನ ತಂದೆ ಮಹಾಲಿಂಗಯ್ಯ ಬದುಕಿದ್ದಾಗ 1994 ರಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದತೆ ಪಾಲು ಪಾರಿಕತ್ತು ಆಗಿದೆ ಎಂದರೆ ಗೊತ್ತಿಲ್ಲ. 1994 ನೇ ಇಸವಿಯಲ್ಲಿ ಆಗ ವಿಭಜನೆಯ ಪ್ರಕಾರ ಸರ್ವೆ ನಂ.198 ರಲ್ಲಿ ನನಗೆ 34 ಗುಂಟೆ ಜಮೀನು ಕೊಟ್ಟಿದ್ದಾರೆ ಎಂದರೆ ಸರಿ. ಸದರಿ 34 ಗುಂಟೆ ಜಮೀನು ಇವತ್ತಿಗೂ ಕೂಡ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂ.198 ರಲ್ಲಿರುವ 34 ಗುಂಟೆ ಜಮೀನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ಆ ಜಮೀನಿಗೂ ಹಾಗೂ ದಾವಾ ಜಮೀನಿಗೂ ಸಂಬಂಧವಿಲ್ಲ ಎನ್ನುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ 2018 ನೇ ಇಸವಿಯಲ್ಲಿ ಸರ್ಕಾರದಿಂದ ಸರ್ವೆ ನಂ.163 ಬ್ಯಾಕ್ 3 ರಲ್ಲಿ 3 ಎಕರೆ ಜಮೀನು ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿದಾರರು ಮುಂದುವರೆದ ನನ್ನ ಹೆಸರಿನಲ್ಲಿ ಸದರಿ 3 ಎಕರೆ ಜಮೀನು ಮಂಜೂರಾಗಿದೆ ನಾನು ಸ್ವಾಧೀನದಲ್ಲಿದ್ದೇನೆ ಎನ್ನುತ್ತಾರೆ. ನನ್ನ ಹೆಸರಿನಲ್ಲಿ 3 ಎಕರೆ ಗ್ರಾಂಟ್ ಆದ ದಾಖಲೆ ನನ್ನ ಬಳಿ ಇದೆ, ನಾನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ನನ್ನ ತಂದೆ ಐಟಂ ನಂ.2 ನ್ನು ದಿಃ03.04.1997 ರಂದು ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.4 1 ನೇ ಪ್ರತಿವಾದಿಯ

ಗಂಡನ ಸ್ವಯಾರ್ಜಿತ ಆಸ್ತಿ ಎಂದರೆ ಗೊತ್ತಿಲ್ಲ. ಐಟಂ ನಂ.7 ನ್ನು 1 ಮತ್ತು 2 ನೇ ಪ್ರತಿವಾದಿಯರು 1991 ನೇ ಇಸವಿಯಲ್ಲಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಐಟಂ ನಂ.7 3 ನೇ ಪ್ರತಿವಾದಿಯ ಸ್ವಾಧೀನತೆ ಯಲ್ಲಿ ಎಂದರೆ ಸರಿ. ಉಳಿದ ದಾವಾ ಐಟಂ ಗಳಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಸ್ವಾಧೀನತೆ ಯಲ್ಲಿದ್ದಾರೆ ಎಂದರೆ ಸರಿ. 1994 ರಲ್ಲಿ ಐಟಂ ನಂ. 1 , 2 ಮತ್ತು 3 ಆಸ್ತಿಗಳು ಪಾಲು ಪಾರಿಕತ್ತಿನ ಪ್ರಕಾರ 1 ನೇ ಪ್ರತಿವಾದಿಗೆ ಬಂದಿದೆ ಎಂದರೆ ಸರಿಯಲ್ಲ. ಸದರಿ ಪಾಲು ಪಾರಿಕತ್ತಿನ ಪ್ರಕಾರ ಐಟಂ 5 ಮತ್ತು 6 ರ ಆಸ್ತಿಗಳು 2 ನೇ ಪ್ರತಿವಾದಿಗೆ ಬಂದಿದೆ ಎಂದರೆ ಸರಿಯಲ್ಲ . ಐಟಂ ನಂ. 4 ರ ಆಸ್ತಿಯು ನನ್ನ ತಂದೆಯ ಮತ್ತು ತಾಯಿಯ ಉಪಜೀವನಕ್ಕೆ ಬಿಡಲಾಗಿತ್ತು ಎಂದರೆ ಸರಿಯಲ್ಲ. ಪಾಲು ಪಾರಿಕತ್ತಿನ ಪ್ರಕಾರ ಐಟಂ 4 ರ ಆಸ್ತಿಯು 1 ನೇ ಪ್ರತಿವಾದಿಗೆ ಸೇರಬೇಕೆಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಪಾಲು ಪಾರಿಕತ್ತಿನಲ್ಲಿ ಒಟ್ಟು ಕುಟುಂಬದ ಎಲ್ಲಾ ಸಾಲವನ್ನು 1 ನೇ ಪ್ರತಿವಾದಿಯು ತೀರಿಸಬೇಕೆಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಈ ಹಂತದಲ್ಲಿ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿದಾರರಿಗೆ ಮುಖ್ಯ ವಿಚಾರಣೆಯ ಶಪಥ ಪತ್ರದ 3 ನೇ ಪುಟದ ಮೇಲಿರುವ ಸಹಿಯನ್ನು ಮೊಖಾಬಿಲೆ ಮಾಡಿ ಅದು ನಿಮ್ಮ ಸಹಿ ಎಂದು ಸಾಕ್ಷಿದಾರರಿಗೆ ಕೇಳಿದಾಗ ಸಾಕ್ಷಿದಾರರು ಹೌದು ಎಂದು ಉತ್ತರಿಸಿರುತ್ತಾರೆ. ದಿನಾಂಕಃ21.05.1994 ರ ನೊಂದಣಿ ರಹಿತ ಮತ್ತು ಮುದ್ರಾಂಖ ರಹಿತ ಪಂಚಾಯಿತಿ ಪಾರಿಕತ್ತು ಮೊಖಾಬಿಲೆ ಮಾಡಿ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿದಾರರಿಗೆ ಸದರಿ ಪಾರಿಕತ್ತಿನ ಮೇಲೆ ನಿಮ್ಮ ಸಹಿ ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿದಾರರು ಹೌದು ಎಂದು ಒಪ್ಪಿಕೊಂಡಿದ್ದಾರೆ. ಸಾಕ್ಷಿದಾರರು ಸದರಿ ಪಂಚಾಯಿತಿ ಪಾರಿಕತ್ತಿ ಮೇಲಿರುವ ತನ್ನ ಸಹಿಯನ್ನು ಒಪ್ಪಿಕೊಂಡಿರುವುದರಿಂದ ಸದರಿ ದಾಖಲೆಯನ್ನು ನಿಡಿ - 1 ಎಂದು ಗುರುತಿಸಲಾಯಿತು. ನಾನು ಮತ್ತು 1 ಮತ್ತು 2 ನೇ ಪ್ರತಿವಾದಿಗಳು ಒಟ್ಟಿ ಕುಟುಂಬದಲ್ಲಿದ್ದೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. 1994 ರ ಪಾರಿಕತ್ತಿನ ಪ್ರಕಾರ ನನಗೂ ಮತ್ತು ನನ್ನ ಸಹೋದರಿಯರಿಗೂ ನಮ್ಮ ಪಾಲಿನ ಆಸ್ತಿ ಬಂದಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು

ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಬದುಕಿದ್ದಾಗ ಒಟ್ಟು ಕುಟುಂಬದ ಅಭಿವೃದ್ಧಿಗಾಗಿ ಐಟಂ ನಂ. 3 ರ ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು, ಐಟಂ ನಂ.7 ನ್ನು ಮಾರಾಟ ಮಾಡಿ ಮನೆಯ ಪಕ್ಕದಲ್ಲಿ ಬೇರೆ ಜಮೀನು ಖರೀದಿ ಮಾಡಲಾಗಿದೆ ಎನ್ನುತ್ತಾರೆ.

ಐಟಂ ನಂ.8 ರಲ್ಲಿರುವ ಟ್ರಾಕ್ಟರ್ 1 ನೇ ಪ್ರತಿವಾದಿಯ ಗಂಡ ತನ್ನ ಸ್ವಯಾರ್ಜಿತ ಹಣದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ನಮ್ಮ ಪಿತ್ರಾರ್ಜಿತ ಆಸ್ತಿಯಿಂದ ಖರೀದಿ ಮಾಡಲಾಗಿದೆ ಎನ್ನುತ್ತಾರೆ. ಐಟಂ ನಂ.8 ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 3 ನೇ ಪ್ರತಿವಾದಿ ಪರ ಶ್ರೀ ಸಿ.ಆರ್.ಬಿ. ವಕೀಲರು ಪಾಟೀ ಸವಲಿಗಾಗಿ ಕಾಲಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದುಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ/-

ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು,

ಗುಬ್ಬಿ.